RNU AIR DHARWAD

NOVEMBER 08, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುತ್ಸದ್ದಿ, ಮಾಜಿ ಉಪ ಪ್ರಧಾನಮಂತ್ರಿ, ಭಾರತರತ್ನ ಲಾಲ್‌ಕೃ ್ಣ ಅಡ್ವಾಣಿ ಅವರ 100ನೇ ಜನ್ಮದಿನವಿಂದು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಅಡ್ವಾಣಿ ಅವರ ವ್ಯಕ್ತಿತ್ವ ಮತ್ತು ಕೃತಿತ್ವದ ಕುರಿತು ಬರೆದ ಲೇಖನವನ್ನು, ಇಂದು ನಾಡಿನ ಬ ಹುತೇಕ ಪತ್ರಿಕೆಗಳು, ಪ್ರಕಟಿಸಿವೆ.

<><><>

ಕೇಂದ್ರ ಶಿಕ್ಷಣ ಖಾತೆ ಸಚಿವ, ಪ್ರಲ್ಹಾದ ಜೋಶಿ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ಅಡ್ವಾಣಿ ಅವರಿಗೆ, ಭಗವಂತ ಆಯುರಾರೋಗ್ಯ ಕರುಣಿಸಲಿ ಎಂದು, ಶುಭ ಹಾರೈಸಿದ್ದಾರೆ.

<><><>

ಪ್ರಜಾಸೇವೆ ಆಂದೋಲನ ಸಭೆಗಳಲ್ಲಿ, ರಾಜ್ಯಾದ್ಯಂತ ಈ ವರೆಗೆ, 1 ಲಕ್ಷ 8 ಸಾವಿರದ 57 ಅರ್ಜಿಗಳ ಪೈಕಿ, 99 ಸಾವಿರದ 142 ಅರ್ಜಿಗಳನ್ನು, ಪರಿಹರಿಸಿ, ಶೇಕಡ 91ರ ್ಟ ಪ್ರಗತಿ ಸಾಧಿಸಲಾಗಿದೆ ಎಂದು, ಸಹಕಾರ ಖಾತೆ ಸಚಿವ, ಲಕ್ಷಣ ಸವದಿ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಶಿರಸಿಯ ಅಂಬೇಡ್ಕರ ಭವನದಲ್ಲಿ, ಪ್ರಜಾಸೇವೆ ಆಂದೋಲನ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಸಾರ್ವಜನಿಕರಿಂದ ಸ್ವೀಕರಿಸುವ ಅರ್ಜಿಗಳಿಗೆ, ಗರಿಷ್ಟ 15 ದಿನಗಳಲ್ಲಿ ಪರಿಹಾರ ಒದಗಿಸುವಂತೆ, ಅಧಿಕಾರಿಗಳಿಗೆ ಸೂಚಿಸಿದ್ದಾಗಿ, ಸಚಿವರು ಹೇಳಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನೋಟು ಅಮಾನ್ಯೀಕರಣ – ಡಿ ಮೊನೆಟೈಸೇಷನ್‌ಗೆ ಚಾಲನೆ ನೀಡಿ, ಇಂದಿಗೆ ಹತ್ತು ವರ್ಷಗಳು ಪೂರ್ಣಗೊಂಡವು. 500 ಮತ್ತು 1000 ರೂಪಾಯಿ ಮುಖಬೆಲೆಯ ನೋಟುಗಳನ್ನು, ಚಲಾವಣೆಯಿಂದ ಹಿಂಪಡೆಯುವುದಾಗಿ ಘೋಷಿಸಿದ ಹಿನ್ನೆಲೆ, ದೇಶದಲ್ಲಿ ಚಲಾವಣೆಯಲ್ಲಿದ್ದ, ಒಟ್ಟು ನಗದಿನ ಪೈಕಿ, ಶೇಕಡ 86 ರ ್ಟ ಮೌಲ್ಯದ ನೋಟುಗಳು, ಅಮಾನ್ಯಗೊಂಡವು.

<><><>

ಮೇರಾ ಯುವ ಭಾರತ್, ಶಿವಮೊಗ್ಗ ಘಟಕ, ಪ್ರೇರಣಾ ಎಜುಕೇ ‘ನಲ್ ಆಂಡ್ ಸೋಶಿಯಲ್ ಟ್ರಸ್ಟ್ ಸಹಯೋಗದಲ್ಲಿ, "ವಿಕಸಿತ ಭಾರತ, ಯುವ ಸಂವಾದ – ನಿಮ್ಮ ಮತವನ್ನು ತಿಳಿಯಿರಿ" ಕಾರ್ಯಕ್ರಮ, ಜರುಗಿತು. ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದ, ಬಿ.ವೈ. ರಾಘವೇಂದ್ರ, ಚಾಲನೆ ನೀಡಿದರು. 300ಕ್ಕೂ ಹೆಚ್ಚು ಯುವಜನತೆ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

<><><>

ರಾಜ್ಯದ ಕಬ್ಬು ಬೆಳೆಗಾರರಿಗೆ, ಮಹಾರಾಷ್ಟ್ರ ಮಾದರಿಯಲ್ಲಿ, ಪ್ರತಿ ಟನ್ ಕಬ್ಬಿಗೆ, 4 ಸಾವಿರದ 200 ರೂಪಾಯಿ, ದರ ನಿಗದಿ ಪಡಿಸುವಂತೆ, ವಿಧಾನಸಭೆ ವಿಪಕ್ಷ ನಾಯಕ, ಆರ್.ಅಶೋಕ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ರೈತರ ಹಿತ ಕಾಪಾಡಬೇಕಾದ ಸರ್ಕಾರ, ಸಕ್ಕರೆ ಕಾರ್ಖಾನೆಗಳ ಮಾಲೀಕರ ಒತ್ತಡಕ್ಕೆ ಮಣಿಯದೆ, ರೈತರ ಹಿತ ಕಾಪಾಡಲಿ ಎಂದು ಆಗ್ರಹಿಸಿದ್ದಾರೆ.

<><><>

ರಾಜ್ಯ ಸರ್ಕಾರದ, ವಿವಿಧ ಯೋಜನೆಗಳ ಫಲಾನುಭವಿಗಳಿಗೆ ವಿತರಿಸಲಾಗುವ, ವಾಹನಗಳು ಹಾಗೂ ಯಂತ್ರೋಪಕರಣಗಳ ಮೇಲೆ, ಏಕರೂಪದ ಸರ್ಕಾರಿ ಕೋ–ಬ್ರಾಂಡಿಂಗ್ ಅಳವಡಿಸಲು ರಾಜ್ಯ ಸರ್ಕಾರ ನಿರ್ಣಯಿಸಿದೆ. ಮುಖ್ಯ ಕಾರ್ಯದರ್ಶಿ, ಡಾಕ್ಟರ್ ಶಾಲಿನಿ ರಜನೀಶ, ಸರ್ಕಾರದ ಯೋಜನೆಗಳಡಿ ವಿತರಿಸಲಾಗುವ, ಆಟೋ ರಿಕ್ಷಾಗಳು, ಕಾರುಗಳು ಸೇರಿದಂತೆ, ತಳ್ಳುವ ಗಾಡಿಗಳು ಮತ್ತು ಯಂತ್ರೋಪಕರಣಗಳ ಮೇಲೆ, ನಿಗದಿಪಡಿಸಿದ ಮಾದರಿ ವಿನ್ಯಾಸದಂತೆ, ಹಳದಿ ಮತ್ತು ಕೆಂಪು ಬಣ್ಣ, ಅಧಿಕೃತ ಲಾಂಛನ ಕಡ್ಡಾಯ ಗೊಳಿಸಲಾಗಿದೆ, ಎಂದಿದ್ದಾರೆ.

<><><>

ದೀಪಾವಳಿ ಹಬ್ಬದ ಸಂಭ್ರಮ, ನಾಡಿನಾದ್ಯಂತ ಮನೆ ಮಾಡಿದ್ದು, ನರಕ ಚತುರ್ದಶಿ ಹಿನ್ನೆಲೆ, ಇಂದು ಉತ್ತರ ಕರ್ನಾಟಕ ಭಾಗದ, ವಿಶಿಷ್ಟ ಜಾನಪದ ಸೊಗಡಿನ, ಗ್ರಾಮೀಣ ಆಚರಣೆಗಳ ಕುರಿತು, ಖ್ಯಾತ ಜಾನಪದ ವಿದ್ವಾಂಸ, ಹುಬ್ಬಳ್ಳಿಯ ಡಾಕ್ಟರ್ ರಾಮಣ್ಣ ಮೂಲಗಿ, ಮಾಹಿತಿ ನೀಡಿದ್ದಾರೆ.

<><><>

ಡಾ. ರಾಮಣ್ಣ ಮೂಲಗಿ ಧ್ವನಿ 44 ಸೆಕೆಂದುಗಳು

<><><>

ದೀಪಾವಳಿ ಹಬ್ಬದ ಸಂದರ್ಭದಲ್ಲಿ, ಪಟಾಕಿ ಹಾಗೂ ಸಿಡಿಮದ್ದುಗಳಿಂದ, ಸುಟ್ಟ ಗಾಯಗಳಾದಲ್ಲಿ, ತುರ್ತು ಚಿಕಿತ್ಸೆ ನೀಡಲು, ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ, ಪ್ರತ್ಯೇಕ ವಿಭಾಗ ಆರಂಭಿಸಲಾಗಿದೆ ಎಂದು, ಆಸ್ಪತ್ರೆಯ ಅಧೀಕ್ಷಕ ಡಾಕ್ಟರ್ ನಾಗೇಂದ್ರಪ್ಪ, ತಿಳಿಸಿದ್ದಾರೆ.

<><><>

ಇಂದು ರೇಡಿಯಾಲಜಿ ಅಂತಾರಾಷ್ಟ್ರೀಯ ದಿನಾಚರಣೆ. ರೇಡಿಯಾಲಜಿ ಚಿಕಿತ್ಸೆ ಮಹತ್ವದ ಕುರಿತು, ಜನ ಜಾಗೃತಿ ಮೂಡಿಸುವ, ದಿನ.

<><><>

'ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ'ಯಡಿ, ಪ್ರೌಢಶಾಲೆ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ, ಬೆಳಗಾವಿ ವಿಭಾಗ ಮಟ್ಟದ, ಶಾಲಾ ಬ್ಯಾಂಡ್ ನುಡಿಸುವ ಸ್ಪರ್ಧೆಗಳು, ಧಾರವಾಡ ತಾಲೂಕು, ದಡ್ಡಿಕಮಲಾಪುರ ಗ್ರಾಮದ, ಭಾರತ್ ಸ್ಕೌಟ್ ಮತ್ತು ಗೈಡ್ಸ್ ಆವರಣ, ಹಾಗೂ ಮುಗದ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೈದಾನದಲ್ಲಿ, ಜರುಗಿದವು. ಬೆಳಗಾವಿ ವಿಭಾಗದ, ಏಳು ಜಿಲ್ಲೆಗಳ, 11 ತಂಡಗಳಿಂದ, 450 ವಿದ್ಯಾರ್ಥಿಗಳು ಪೈಪ್ ಹಾಗೂ ಬ್ರಾಸ್ ಬ್ಯಾಂಡ್ ವಿಭಾಗಗಳಲ್ಲಿ, ವಾದ್ಯಕೌಶಲ್ಯ ಪ್ರದರ್ಶಿಸಿದರು.

ಬಾಲಕಿಯರ ಪೈಪ್ ಬ್ಯಾಂಡ್ ವಿಭಾಗದಲ್ಲಿ, ಬೆಳಗಾವಿಯ ಕೇಂದ್ರೀಯ ವಿದ್ಯಾಲಯ ನಂಬರ್ 1, ಪ್ರಥಮ ಸ್ಥಾನ ಪಡೆಯಿತು

ಬಾಲಕಿಯರ ಬ್ರಾಸ್ ಬ್ಯಾಂಡ್ ವಿಭಾಗದಲ್ಲಿ, ಬೈಲಹೊಂಗಲದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಪ್ರಥಮ ಸ್ಥಾನ ಗಳಿಸಿತು.

ಬಾಲಕರ ಬ್ರಾಸ್ ಬ್ಯಾಂಡ್ ವಿಭಾಗದಲ್ಲಿ, ಬೆಳಗಾವಿ ಕ್ಯಾಂಪಿನ, ಸೇಂಟ್ ಪಾಲ್ಸ್ ಹೈಸ್ಕೂಲ್ ಪ್ರಥಮ ಸ್ಥಾನಗಳಿಸಿ, ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿವೆ.

<><><>

ಕಾನೂನು ಸೇವೆಗಳ ದಿನಾಚರಣೆ ಹಿನ್ನೆಲೆ, ನಾಳೆ, ಸೋಮವಾರ ಬೆಳಗ್ಗೆ 7 ಗಂಟೆಗೆ, ರಾಜ್ಯಾದ್ಯಂತ, ಎಲ್ಲಜಿಲ್ಲಾ ನ್ಯಾಯಾಲಯಗಳು, ಜನ ಜಾಗೃತಿ ಸೈಕಲ್ ಜಾಥಾ ಆಯೋಜಿಸಿವೆ.

<><><>

'ಕರ್ನಾಟಕ ರೈತ ಸುರಕ್ಷಾ; ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ'ಯಡಿ, ಪ್ರಸಕ್ತ ಸಾಲಿನ, ಹಿಂಗಾರು ಹಾಗೂ ಬೇಸಿಗೆ ಹಂಗಾಮಿಗೆ, ಬೆಳೆ ವಿಮೆ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.